ದಿನಾಂಕ 13-08-2019 ರಂದು ಸಾಕ್ಷಿಧಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

:ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :

ನಾನು ಆಧರಿಸುವ ಕ್ರಯ ಪತ್ರದ ದಿನಾಂಕ 16-03-1970 ರಂತೆ ವಿಪಿಸಿ ನಂ.104 ಎಂಟ್ರಿಯಾಗಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ಆ ಉತಾರ ಹಾಜರು ಮಾಡಿದ್ದೇನೆ. ನಾನು ಆಧರಿಸುವ ಕ್ರಯ ಪತ್ರವು ಖೊಟ್ಟಿಯಾಗಿದ್ದರಿಂದ ವಿಪಿಸಿ ನಂ.104 ಎಂಟ್ರಿಯಾಗಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ಆದ್ದರಿಂದಲೇ ನಾನು ವಿಪಿಸಿ ನಂ.104 ರ ಉತಾರೆಯನ್ನು ಹಾಜರುಪಡಿಸಿಲ್ಲಾ ಅಂದ್ರೆ ಸರಿಯಲ್ಲಾ.

ವಿಪಿಸಿ ನಂ.106/2 ನೇದ್ದನ್ನು ನಮ್ಮ ಪೂರ್ವಜರಾದ ಅಜ್ಜ ವೆಂಕಪ್ಪ ಖರೀದಿಸಿದ್ದಾರೆ. ವಿಪಿಸಿ ನಂ.107 ನೇದ್ದನ್ನು ನಮ್ಮ ಪೂರ್ವಜರಾದ ಇನ್ನೊಬ್ಬ ಅಜ್ಜ ಗೋವಿಂದಪ್ಪ ಎನ್ನುವವರು ಖರೀದಿಸಿದ್ದಾರೆ. ವಿಪಿಸಿ ನಂ.108 ನೇದ್ದನ್ನು ಯಾವ ಅಜ್ಜ ಖರೀದಿಸಿದ್ದಾರೆ ಅಂತಾ ನಿಖರವಾಗಿ ಗೊತ್ತಿಲ್ಲಾ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನು ಉಳಿದ ಬೇರೆ ಬೇರೆ ಆಸ್ತಿಗಳನ್ನು ನಮ್ಮ ಮೂರು ಜನ ಅಜ್ಜಂದಿರು ಖರೀದಿಸಿದ್ದಾರೆ. ಗೋವಿಂದಪ್ಪ, ಯಲ್ಲಪ್ಪ ಮತ್ತು ವೆಂಕಪ್ಪ ಎನ್ನುವವರು ಖರೀದಿಸಿದ ಆಸ್ತಿಗಳು ಅವರವರ ಹೆಸರಿನಲ್ಲಿ ಖಾತೆ ಇರುತ್ತವೆ. ಈಗಲೂ ಅವರ ಹೆಸರಿನಲ್ಲಿ ಇವೆ ಅಂದ್ರೆ ಸರಿಯಲ್ಲಾ. ಅವರ ವಿಭಾಗಕ್ಕೆ ಬಂದಂತೆ ಅವರವರ ಮಕ್ಕಳು ಮೊಮ್ಮಕ್ಕಳ ಹೆಸರಿನಲ್ಲಿ ಖಾತೆ ವರ್ಗಾವಣೆಯಾಗಿರುತ್ತವೆ.

ಶೇತ್ಕರಿ ಜಮೀನುಗಳು ಅವರವರ ಹೆಸರಿನಲ್ಲಿ ಖಾತೆ ಇರುತ್ತವೆ ಅಂದ್ರೆ ಸಾಕ್ಷಿಯು ಕೆಲವೊಂದು ಖಾತೆಯಾಗಿರುತ್ತವೆ, ಕೆಲವೊಂದು ನಮ್ಮ ಅಜ್ಜಂದಿರ ಹೆಸರಿನಲ್ಲಿ ಇರುತ್ತವೆ. ಯಾವ ಯಾವ ಆಸಿತಗಳು ವರ್ಗಾಣೆಯಾಗಿವೆ, ಯಾವ ಆಸ್ತಿ ವರ್ಗಾವಣೆಯಾಗಿಲ್ಲಾ ಅಂದ್ರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಅನ್ನುತ್ತಾರೆ. ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಯಾದವರು ತಮ್ಮ ಇಚ್ಛೆಯ ಪ್ರಕಾರ ವಹಿವಾಟು ಮಾಡುತ್ತಾರೆ ಅಂದ್ರೆ ನಿಜ. ಸೋಮಪ್ಪ, ಯಲ್ಲಪ್ಪ ಹಾಗೂ ವೆಂಕಪ್ಪ ಇವರ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು ತಮ್ಮ ಹೆಸರಿಗೆ ಖಾತೆಯಾದ ಪ್ರಕಾರ ತಮ್ಮ ಇಷ್ಟದ ಪ್ರಕಾರ ವ್ಯವಹಾರ ಮಾಡುತ್ತಾರೆ ಅಂದ್ರೆ ನಿಜ. ನಮ್ಮ ಕುಟುಂಬದಲ್ಲಿ ಏಕತ್ರ ಘರಾಣೇದ ಆಸ್ತಿಗಳು ಉಳಿದಿರುವುದಿಲ್ಲಾ ಅಂದ್ರೆ ಸರಿಯಲ್ಲಾ.

ದಿನಾಂಕಃ 16-10-2006 ರಂದು ವಿಪಿಸಿ ನಂ.103 ನ್ನು 5 ನೇ ಪ್ರತಿವಾದಿಯು ರಾಯ್ಕುರ ಎನ್ನುವವರಿಗೆ ಖರೀದಿಗೆ ಕೊಟ್ಟಿದ್ದಾರೆ ಅಂದ್ರೆ ನಿಜ. ಆ ಕಾಲಕ್ಕೆ ವಿಪಿಸಿ ನಂ.103 ನ್ನು 5 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮತ್ತು ವಹಿವಾಟಿಯಲ್ಲಿ ಇತ್ತು ಅಂದ್ರೆ ನಿಜ. ಅದೇ ದಿನ

ವಿಪಿಸಿ ನಂ.104 ರಲ್ಲಿನ ಸ್ವಲ್ಪ ಭಾಗವನ್ನು ಮೋಹನ ದ್ಯಾಮಕ್ಕನವರ ಎನ್ನುವವರಿಂದ 5 ನೇ ಪ್ರತಿವಾದಿ ಖರೀದಿ ಹಿಡಿದಿದ್ದಾನೆ ಅಂದ್ರೆ ನಿಜ. ವಿಪಿಸಿ ನಂ.103 ನ್ನು 5 ನೇ ಪ್ರತಿವಾದಿಯು ಮಾರಾಟ ಮಾಡಿರುವುದನ್ನು ಪ್ರಶಿಸಿದ್ದೇನೆ. ಆ ಬಗ್ಗೆ ದಾವಾ ಸಲ್ಲಿಸಿರುವುದಿಲ್ಲಾ, ಮನೆಯಲ್ಲಿ ಕುಳಿತು 5 ನೇ ಪ್ರತಿವಾದಿಯನ್ನು ಕೇಳಿದ್ದೇನೆ. ಅದಕ್ಕೆ 5 ನೇ ಪ್ರತಿವಾದಿ ನಮ್ಮ ಆಸ್ತಿಗಳ ಬಗ್ಗೆ ಬಗೆಹರಿಸಿರಿ, ಇಲ್ಲದಿದ್ದರೆ ಹಾಗೆ ಮಾಡುತ್ತೇನೆ ಅಂತಾ ಹೇಳಿದ್ದಾನೆ. 2013 ರಲ್ಲಿ ಪ್ರಶ್ನೆ ಮಾಡಿದ್ದೇನೆ. ಈವರೆಗೂ ಜಮೀನಿನ ವ್ಯಾಜ್ಯಗಳು ಬಗೆಹರಿದಿರುವುದಿಲ್ಲಾ. ಎಲ್ಲ ಆಸ್ತಿಗಳನ್ನು ಸೇರಿಸಿ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳು ಪ್ರಯತ್ನಿಸಿದ್ದೀರಾ ಅಂದ್ರೆ ಸಾಕ್ಷಿಯು ಎರಡು ಆಸ್ತಿಗಳ ಕುರಿತು ನ್ಯಾಯಾಲಯದಲ್ಲಿ ವ್ಯಾಜ್ಯಗಳು ಚಾಲ್ತಿಯಲ್ಲಿ ಇರುವುದರಿಂದ ಆ ವ್ಯಾಜ್ಯಗಳು ಮುಗಿಯುವವರೆಗೆ ಎಲ್ಲ ಆಸ್ತಿಗಳ ಕುರಿತು ದಾವಾ ಸಲ್ಲಿಸಲು ಬರುವುದಿಲ್ಲಾ, ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇರುವ ವ್ಯಾಜ್ಯಗಳು ನಂಬರುಗಳು ನನಗೆ ಗೊತ್ತಿಲ್ಲ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲ. ವಿಪಿಸಿ ನಂ.104 ನ್ನು (ಹಳೇ ನಂ.412) ನ್ನು ಫಕ್ಕೀರಪ್ಪ ಹಳೇಕೋಟೆ ಎನ್ನುವವರಿಂದ ಗಂಗವ್ವ ದ್ಯಾಮಕ್ಕನವರ ಎನ್ನುವವರು ದಿನಾಂಕಃ 12-04-1960 ರಂದು ರೂ.300/- ಗಳಿಗೆ ಖರೀದಿಸಿದ್ದಾರೆ ಅಂದ್ರೆ ನಿಜ. ಸದರಿ ಕ್ರಯ ಪತ್ರವನ್ನು ನಿಡಿ-1 ಅಂತಾ ಗುರುತಿಸಲಾಯಿತು. ಸದರಿ ಕ್ರಯದ ಸ್ಟಾಂಪ್ ಖರೀದಿಸಿದ ಬಗ್ಗೆ ಗಂಗವ್ವ ದ್ಯಾಮಕ್ಕನವರ ಇವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಡಿ-1(ಎ) ಅಂತಾ ಗುರುತಿಸಲಾಯಿತು. ಗಂಗವ್ವ ದ್ಯಾಮಕ್ಕನವರ ಎನ್ನುವವರು ತಾನು ಖರೀದಿಸಿದ ಆಸ್ತಿಯ ಪೈಕಿ ಸ್ವಲ್ಪ ಭಾಗವನ್ನು ಹಾಲವ್ವಳಿಗೆ ಮಾರಾಟ ಮಾಡುವ ಪ್ರಸಂಗ ಬಂದಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ನಿಪಿ-5 ಕ್ರಯ ಪತ್ರವನ್ನು ಕೇಶವರಾವ್ ಎನ್ನುವವರು ಬರೆದಿದ್ದಾರೆ. ನಿಪಿ-5 ಮೂಲ ಕ್ರಯ ಪತ್ರದಲ್ಲಿ ಇರುವ ಸಹಿ ಗಂಗವ್ವ ದ್ಯಾಮಕ್ಕನವರ ಇವರ ಸಹಿ ಇರುವುದಿಲ್ಲಾ ಅಂದ್ರೆ ಸರಿಯಲ್ಲಾ. ಕೇಶವರಾವ್ ಎನ್ನುವವರು ಗಂಗವ್ವ ದ್ಯಾಮಕ್ಕನವರ ಇವರ

ಸಹಿಯನ್ನು ಸೃಷ್ಟಿಸಿದ್ದಾರೆ ಅಂದ್ರೆ ಸರಿಯಲ್ಲಾ. ನಿಪಿ-5 ಕ್ರಯ ಪತ್ರದಂತೆ ಗಂಗವ್ವ ದ್ಯಾಮಕ್ಕನವರ ಕ್ರಯಕ್ಕೆ ಕೊಟ್ಟಿರುವುದಿಲ್ಲಾ ಅಂದ್ರೆ ಸರಿಯಲ್ಲಾ ಅದೇ ಕಾರಣದಿಂದ ಹಾಲವ್ವ ಎನ್ನುವವರ ಹೆಸರು ಪಂಚಾಯತಿ ದಾಖಲೆಗಳಲ್ಲಿ ನಮೂದಾಗಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ನಿಪಿ-5 ಮೂಲ ಕ್ರಯ ಪತ್ರವನ್ನು ಕೇಶವರಾವ್ ನಮಗೆ ಕೊಟ್ಟಿರುವುದಿಲ್ಲಾ. ನಿಪಿ-5 ಕ್ರಯ ಕ್ರಯ ಪತ್ರದ ಮೇಲೆ ಇರುವ ಸಹಿ ಗಂಗವ್ವ ದ್ಯಾಮಕ್ಕನವರ ಇರುವುದಿಲ್ಲಾ ಅಂದ್ರೆ ಸರಿಯಲ್ಲಾ. ಅದೇ ಕಾರಣದಿಂದ ಹಾಲವ್ವ ಎನ್ನುವವರ ಹೆಸರು ಪಂಚಾಯತಿ ದಾಖಲೆಗಳಲ್ಲಿ ನಮೂದಾಗಿರುವುದಿಲ್ಲಾ ಅಂದ್ರೆ ಸರಿಯಲ್ಲಾ.

ನಾನು ಗೋಡೌನ್ ಕಟ್ಟಿಸಲು ಪಂಚಾಯತಿಯಿಂದ ಪರವಾನಿಗೆ ಪಡೆದುಕೊಂಡಿದ್ದೇನೆ. ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲಾ. ಗೋಡೌನ್ ಕಟ್ಟಿಸಲು ಪಂಚಾಯತಿಯಿಂದ ಪರವಾನಿಗೆ ಪಡೆದುಕೊಂಡಿರುವುದಿಲ್ಲಾ ಮತ್ತು ಗೌಡೌನ್ ಕಟ್ಟಲು ಯಾವುದೇ ತಯಾರಿ ಮಾಡಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ವಿಪಿಸಿ ನಂ.106/2, 107, 108 ರ ಹಿಂಭಾಗದಲ್ಲಿ ಯಾವುದೇ ಖುಲ್ಲಾ ಜಾಗೆ ಇರುವುದಿಲ್ಲಾ ಅಂದ್ರೆ ಸರಿಯಲ್ಲಾ. ವಿಪಿಸಿ ನಂ. 106/2, 107, 108 ರ ಹಿಂಭಾಗದಲ್ಲಿ ಯಾವುದೇ ಖುಲ್ಲಾ ಜಾಗೆಯು 1 ರಿಂದ 3 ನೇ ಪ್ರತಿವಾದಿಯರಿಗೆ ಸೇರಿದ್ದು ಅಂದ್ರೆ ಸರಿಯಲ್ಲಾ. ದಿನಾಕಃ 16-10-2006 ರಂದು 5 ನೇ ಪ್ರತಿವಾದಿ ವಿಪಿಸಿ ನಂ.103 ನ್ನು ರಾಯ್ಕುರ ಎನ್ನುವವರಿಗೆ ಮಾರಾಟ ಮಾಡಿದ್ದಾರೆ. ಅದೇ ದಿನ ವಿಪಿಸಿ ನಂ.104 ರಲ್ಲಿನ ಸ್ವಲ್ಪ ಭಾಗವನ್ನು 5 ನೇ ಪ್ರತಿವಾದಿ ಖರೀದಿಸಿದ್ದಾರೆ ಅಂದ್ರೆ ಸಾಕ್ಷಿಯು ನನಗೆ ನಂತರದಲ್ಲಿ ಗೊತ್ತಾಗಿದೆ ಅನ್ನುತ್ತಾರೆ. 2013 ರಲ್ಲಿ ನಮ್ಮ ಮನೆಯಲ್ಲಿ ಇದ್ದ ಹಳೆಯ ದಾಖಲೆಗಳನ್ನು ನೋಡಿದ್ದೇನೆ. ಖರೀದಿ ಮಾಡಿದ ಬಗ್ಗೆ ಮತ್ತು ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ತೆಗೆಸಿ ನೋಡಿದಾಗ ಗೊತ್ತಾಗಿದೆ. ಆ ರೀತಿ ಹುಟ್ಟಿಸಿಕೊಂಡು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲ. ಸದರಿ ಖರೀದಿ ವ್ಯವಹಾರಗಳ ಬಗ್ಗೆ ನನಗೆ ಮತ್ತು ನಮ್ಮ ಕುಟುಂಬದವರಿಗೆ 2006 ರಲ್ಲಿಯೇ ಗೊತ್ತಾಗಿತ್ತು ಅಂದ್ರೆ ಸರಿಯಲ್ಲಾ. ದಾವಾ ಸಲ್ಲಿಸುವ ಉದ್ದೇಶಕ್ಕಾಗಿ 2013 ರಲ್ಲಿ ಗೊತ್ತಾಗಿದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲ. ಪ್ರತಿವಾದ ಪತ್ರದ ಜೊತೆಗೆ ಇರುವ ಹಾತ ನಕಾಶೆಯ ವಾಸ್ತವಿಕವಾಗಿದೆ ಆದರೆ ಅಳತೆಗಳು ತಪ್ಪಾಗಿವೆ ವಿಪಿಸಿ ನಂ.103 ಮತ್ತು 104 ನ್ನು ಕೂಡಿಸಿ ಕೇಶವರಾಜ್ ಎನ್ನುವವರು ನಮ್ಮ ಅಜ್ಜನಿಗೆ ಮಾರಾಟ ಮಾಡಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ವಿಪಿಸಿ ನಂ.103 ಮತ್ತು 104 ನ್ನು ಕೂಡಿಸಿ ಕೇಶವರಾಜ್ ಎನ್ನುವವರು ನಮ್ಮ ಅಜ್ಜನಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಇರುವುದಿಲ್ಲಾ ಅಂದ್ರೆ ಸರಿಯಲ್ಲಾ. ಕೇಶವರಾವ್ ಎನ್ನುವವರು 1968 ರಲ್ಲಿ ಹಾಲವ್ವಳಿಂದ ನಾನು ಖರೀದಿಸಿದ್ದ ಆಸ್ತಿ ಅಂತಾ ಬರೆದಿರುವುದು ಸುಳ್ಳು ಅಂದ್ರೆ ಸರಿಯಲ್ಲ. 1968 ರಲ್ಲಿ ಆಗಲೀ ಅಥವಾ ಅದಕ್ಕಿಂತ ಮೊದಲಾಗಲೀ ಕೇಶವರಾವ್ ಎನ್ನುವವರು ಹಾಲವ್ವಳಿಂದ ಖರೀದಿಸಿದ ಆಸ್ತಿ ಅಂತಾ ಬರೆದಿರುವುದು ಸುಳ್ಳು ಅಂದ್ರೆ ಸರಿಯಲ್ಲ. ಆ ಬಗ್ಗೆ ಯಾವುದೇ ಖರೀದಿ ಪತ್ರ ಇರುವುದಿಲ್ಲಾ ಮತ್ತು ಯಾವುದೇ ಖರೀದಿ ವ್ಯವಹಾರ ಆಗಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ನಮ್ಮ ಉದ್ಯೋಗ ವ್ಯಾಪಾರ ಅಂದ್ರೆ ನಿಜ. 1 ರಿಂದ 4 ನೇ ಪ್ರತಿವಾದಿಯರ ಆಸ್ತಿಯನ್ನು ಹೇಗಾದರೂ ಮಾಡಿ ಕಬಳಿಸಬೇಕು ಅನ್ನುವ ಉದ್ದೇಶದಿಂದ ಅವರ ಮೇಲೆ ಒತ್ತಡ ಹಾಕುತ್ತಿದ್ದೇವೆ ಅಂದ್ರೆ ಸರಿಯಲ್ಲಾ. 1 ರಿಂದ 4 ನೇ ಪ್ರತಿವಾದಿಯರಿಗೆ ಕಡಿಮೆ ಮೌಲ್ಯಕ್ಕೆ ಅವರ ಆಸ್ತಿಯನ್ನು ಖರೀದಿಗೆ ಕೇಳಿದ್ದೇವೆ ಅಂದ್ರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ